ಚನ್ನಪಟ್ಟಣದಲ್ಲಿ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ.

467 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಮತ್ತು ಡಿಪೋ ನಿರ್ಮಿಸಲು ಖಾಸಗಿ ಜಮೀನನ್ನು ಪಡೆಯುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ?

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹಿರಿಯ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿರುವುದು ನಿಜವೇ? ಹಾಗಾದರೆ ಈ ತಂಡದ ವರದಿ ಏನು?

ಇ) ಯಾವ ದಿನಾಂಕದ ಮಂಜೂರಾತಿ ಮಾಡಲಾಗುವುದು?

ಈ) ಯಾವ ದಿನಾಂಕದಂದು ಕಾಮಗಾರಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಹೌದು.

ಆ) ಹೌದು. ವರದಿಯು ತಯಾರಿಕೆಯ ಹಂತದಲ್ಲಿದೆ.

ಇ) ಸದರಿ ವಿಷಯದಲ್ಲಿ ತೀರ್ಮಾನ ತೆಗೆದುಕೊಂಡ ಕೂಡಲೇ ಮಂಜೂರಾತಿ ನೀಡಲಾಗುವುದು.

ಈ) ಉದ್ಭವಿಸುವುದಿಲ್ಲ.

ಚನ್ನಪಟ್ಟಣದಲ್ಲಿ ಹೆಚ್ಚುವರಿ ಪಡಿತರ ಚೀಟಿಗಳ ಸಂಖ್ಯೆ

468 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989-90, 1990-91 ಮತ್ತು ಇಲ್ಲಿಯವರೆಗೆ ಚನ್ನಪಟ್ಟಣ ಟೌನ್ ಮತ್ತು ತಾಲ್ಲೂಕಿನಲ್ಲಿ ಹೆಚ್ಚುವರಿ ಪಡಿತರ ಚೀಟಿಗಳನ್ನು ಹಂಚಿದ ಸಂಖ್ಯೆ ಎಷ್ಟು?

ಆ) ಕಳೆದ ಒಂದು ವರ್ಷದಿಂದ ಚನ್ನಪಟ್ಟಣ ಟೌನಿನ ಹೆಚ್ಚುವರಿ ಪಡಿತರ ಚೀಟಿ ಹೊಂದಿದವರಿಗೆ ಆಹಾರಧಾನ್ಯಗಳನ್ನು ಮತ್ತು ಅಗತ್ಯ ವಸ್ತುಗಳನ್ನು ವಿತರಿಸದಿರುವುದು ನಿಜವೇ ?

ಇ) ಹಾಗಿದ್ದರೆ ಈ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಚನ್ನಪಟ್ಟಣ ಟೌನ್ : 2011
ವರ್ಷವಾರು ವಿವರ :

1989-90 - 159 ಪಡಿತರ ಚೀಟಿಗಳು

1990-91 - 1566 "

1991-92 - 286 "

ಈ ಮೇಲಿನ ಅವಧಿಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಪಡಿತರ ಚೀಟಿಗಳನ್ನು ಹಂಚಿರುವುದಿಲ್ಲ.

ಆ) ಹೌದು.

ಇ) ಕಳೆದ ಒಂದು ವರ್ಷದಿಂದ ಕೇಂದ್ರ ಸರ್ಕಾರವು ಅಕ್ಕಿ, ಗೋಧಿ ಮತ್ತು ಸೀಮೆಎಣ್ಣೆಗಳ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಿಲ್ಲ. ಬದಲಾಗಿ ಡಿಸೆಂಬರ್ 1991ರಿಂದ ಅಕ್ಕಿ ಪ್ರಮಾಣವನ್ನು ಕಡಿಮೆ ಮಾಡಿದ್ದಾರೆ. ರಾಜ್ಯದ ಪಡಿತರ ಚೀಟಿದಾರರಿಗೆ ವಿತರಿಸಲು ಅವಶ್ಯಕವಿರುವ ಪ್ರಮಾಣವನ್ನು ಹಂಚಿಕೆ ಮಾಡಲು ಕೇಂದ್ರ ಸರ್ಕಾರವನ್ನು ಸತತವಾಗಿ ಒತ್ತಾಯಿಸಲಾಗಿದೆ.

ಆದರೂ ಈಗಿರುವ ಹಂಚಿಕೆ ಪ್ರಮಾಣದಲ್ಲಿ ಸರಿದೂಗಿಸಿ ಚನ್ನಪಟ್ಟಣ ಟೌನಿನಲ್ಲಿರುವ ಹೆಚ್ಚುವರಿ ಪಡಿತರ ಚೀಟಿದಾರರಿಗೆ ಅಗತ್ಯ ವಸ್ತುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ರೈತರುಗಳ ಸಾಲ ದಾಖಲಾತಿಗಳ ವಾಪಸಾತಿ

422 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಹಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1987 ನೇ ಇಸವಿಯಲ್ಲಿ ಬಡ್ಡಿ ಮನ್ನಾ ಆದಾಗ ಸಹಕಾರ ಸಂಘಗಳಿಗೆ ಅಸಲಿನ ಪೂರ್ತಿ ಹಣವನ್ನು ಪಾವತಿ ಮಾಡಿದ್ದಂತಹ ರೈತರುಗಳಿಗೆ ಅವರು ಆಧಾರವಾಗಿಟ್ಟಿದ್ದ ದಾಖಲಾತಿಗಳನ್ನು ಹಿಂತಿರುಗಿಸಲಾಗಿದೆಯೇ?*

ಆ) *ಇಲ್ಲವಾದಲ್ಲಿ ಹಿಂತಿರುಗಿಸದಿರಲು ಕಾರಣವೇನು?*

ಇ) *ಎಷ್ಟು ಅವಧಿಯಲ್ಲಿ ಆ ದಾಖಲಾತಿಗಳನ್ನೆಲ್ಲಾ ಹಿಂತಿರುಗಿಸಲಾಗುವುದು?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ಹೌದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಾಲಮನ್ನಾ ಘೋಷಣೆಯಿಂದ ಸಹಕಾರಸಂಘಗಳ ನಿಷ್ಕ್ರಿಯತೆ.

423 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಹಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *10,000 ರೂಪಾಯಿವರೆಗಿನ ಸಹಕಾರ ಸಂಘಗಳ ಸಾಲ ಮನ್ನಾ ಮಾಡುತ್ತೇವೆಂಬ ರಾಜಕೀಯ ಘೋಷಣೆಯಿಂದಾಗಿ ರೈತ ಸಾಲ ಕಟ್ಟದೆ ನಿರಾಶನಾಗಿದ್ದು ಸಾಲ ಮನ್ನವೂ ಆಗದೆ ರಾಜ್ಯದ ಎಲ್ಲಾ ಸಹಕಾರ ಸಂಘಗಳೂ ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *10,000 ರೂಪಾಯಿವರೆಗಿನ ಸಾಲ ಮನ್ನಾ ವಿಚಾರದಲ್ಲಿ ಸರ್ಕಾರದ ಖಚಿತ ನಿಲುವೇನು?*

ಇ) *ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಬಂದಿದೆ.

ಆ) 10,000 ರೂಪಾಯಿಯವರೆಗೆ ಸಾಲ ಮನ್ನಾ ಯೋಜನೆ ಈಗಾಗಲೇ ದಿನಾಂಕ 31-3-91ಕ್ಕೆ ಮುಕ್ತಾಯವಾಗಿದ್ದು ಇದನ್ನು ವಿಸ್ತರಿಸುವ ಯೋಜನೆಯಿಲ್ಲ.